**ದಿನಾಂಕ: 13-02-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.**

**ಪಾಟೀ ಸವಾಲುಃ 2ನೇ ಎದುರುದಾರರ ಪರ ಶ್ರೀ.ವಿ.ವಿ.ಸಿ. ವಕೀಲರಿಂದ**

1. ಅಪಘಾತದಲ್ಲಿ ತೀರಿಕೊಂಡಂತಹ ಲೋಕೇಶನ ನನ್ನ ಮಗನಾಗಬೇಕು. ನನಗೆ ಮೂರು ಜನ ಗಂಡು ಮಕ್ಕಳು ಇರುತ್ತಾರೆ. ಮೃತ ಲೋಕೇಶ ನನ್ನ ಮೊದಲಿನ ಮಗ ಆಗಿರುತ್ತಾನೆ. ಮೃತ ಲೋಕೇಶನ ಮದುವೆ ಆಗಿರುವುದಿಲ್ಲ. ಮೃತ ಲೋಕೇಶ ಮೊದಲು ಟೈಪಿಸ್ಟ್ ಆಗಿ ಮತ್ತು ಕಂಪ್ಯೂಟರ್ ಆಪರೇಟರ್ ಆಗಿ ಯಾದಗಿರಿಯ ಡಿ.ಸಿ. ಕಚೇರಿಯಲ್ಲಿ ಕೆಲಸ ಮಾಡುತ್ತಿದ್ದರು. ಅವರು ತಾತ್ಕಾಲಿಕವಾಗಿ ಕೆಲಸದಲ್ಲಿ ಇದ್ದರು. 10-12 ವರ್ಷಗಳಿಂದ ನನ್ನ ಮಗ ಕೆಲಸ ಮಾಡುತ್ತಿದ್ದನು. ನನ್ನ ಮಗ ಲೋಕೇಶ ಡೇಲಿ ವೇಜೆಸ್ ಮೇಲೆ ನೇಮಕ ಆಗಿದ್ದನು. ಲೋಕೇಶನಿಗೆ ಏನು ಸಂಬಳ ಬರುತ್ತಿತ್ತೋ ಅದು ನೇರವಾಗಿ ಅಕೌಂಟ್ ಬರುತ್ತಿತ್ತು. ನಿಮ್ಮ ಮಗನಿಗೆ ಎಷ್ಟು ಸಂಬಳ ಬರುತ್ತಿತ್ತು ಎಂದು ಅವರ ಅಕೌಂಟ್ ಸ್ಟೇಟಮೆಂಟನ್ನು ಹಾಜರುಪಡಿಸಿಲ್ಲ ಎಂದರೆ ಅದರ ಬಗ್ಗೆ ನನಗೆ ಅನುಭವ ಇಲ್ಲ ಎಂದು ಉತ್ತರಿಸುತ್ತಾರೆ. ತನುಶ್ರೀ ಮ್ಯಾನ್ ಪವರ್ ಅಂಡ್ ಸೆಕ್ಯೂರಿಟಿ ಏಜೆನ್ಸಿಯವರ ಮೂಲಕ ಕೆಲಸಕ್ಕೆ ಸೇರಿರುತ್ತಾರೆ. ಅಲ್ಲಿ ದಿನಾಲೂ ಹಾಜರಾತಿ ಇರುತ್ತಿತ್ತೋ ಅಷ್ಟು ದಿನಗಳ ಸಂಬಳ ಕೊಡುತ್ತಿದ್ದರು ಎಂದರೆ ಸರಿ. ನಿಪಿ-8ರ ಪ್ರಕಾರ ಜಿಲ್ಲಾ ಪಂಚಾಯತಿ ಯಾದಗಿರಿಯಲ್ಲಿ ಕೆಲಸ ಮಾಡುತ್ತಿದ್ದರು ಡಿ.ಸಿ. ಕಚೇರಿಯಲ್ಲಿ ಕೆಲಸ ಮಾಡುತ್ತಿರಲಿಲ್ಲ ಎಂದರೆ ಮೊದಲು ಜಿಲ್ಲಾ ಪಂಚಾಯತಿಯಲ್ಲಿ ಕೆಲಸ ಮಾಡುತ್ತಿದ್ದರು ನಂತರ ಡಿ.ಸಿ. ಕಚೇರಿಯಲ್ಲಿ ಕೆಲಸ ಮಾಡುತ್ತಿದ್ದರು ಎಂದು ಉತ್ತರಿಸುತ್ತಾರೆ. ನಿಪಿ-8 ರಿಂದ 11 ನನ್ನ ಮಗ ತೀರಿಕೊಂಡ ನಂತರ ಪಡೆದಿರುತ್ತೇನೆ. ನಿಪಿ-8 ರಿಂದ 11 ರ ದಾಖಲೆಗಳನ್ನು ಈ ಕೇಸಿಗಾಗಿ ಸೃಷ್ಟಿಸಿ ಪಡೆದಿರುತ್ತೀರಿ ಎಂದರೆ ಸರಿಯಲ್ಲ. ನಿಮ್ಮ ಮಗ ಅಪಾಯಿಂಟ್ ಆಗಿರುವ ಬಗ್ಗೆ ಅಪಾಯಿಂಟಮೆಂಟ್ ದಾಖಲೆ ಹಾಜರುಪಡಿಸಿಲ್ಲ ಎಂದರೆ ಯಾದಗಿರಿ ಜಿಲ್ಲಾ ಪಂಚಾಯತಿಯಲ್ಲಿ ಕೆಲಸ ಮಾಡುವುದನ್ನು ಬಿಟ್ಟು ಡಿ.ಸಿ. ಕಚೇರಿಯಲ್ಲಿ ಕೆಲಸ ಮಾಡುತ್ತಿದ್ದರು ಎಂದು ಉತ್ತರಿಸುತ್ತಾರೆ.

2. ಏಜೆನ್ಸಿಯವರು ಯಾರಿಗೆ ನೇಮಕ ಮಾಡಿಕೊಂಡಿರುತ್ತಾರೋ ಅವರ ಕೆಲಸ ಸರಿಯಾಗಿ ಇಲ್ಲದಿದ್ದರೆ ಅವರನ್ನು ತೆಗೆಯುತ್ತಿದ್ದರು ಎಂದರೆ ಸರಿ. ನಿಮ್ಮ ಅರ್ಜಿಯಲ್ಲಿ ನಿಮ್ಮ ಮಗನಿಗೆ 35 ಸಾವಿರ ಸಂಬಳ ಬರುತ್ತದೆ ಎಂದು ಹೇಳಿದ್ದೀರಿ ಅದರ ಪ್ರಕಾರ ಸಂಬಳ ತೋರಿಸಲು ಯಾವುದೇ ದಾಖಲೆ ಹಾಜರುಪಡಿಸಿಲ್ಲ ಎಂದರೆ ಹಾಕಿದ್ದಾರೆ ಎಂದು ಉತ್ತರಿಸುತ್ತಾರೆ. ನಿಪಿ-9 ನ್ನು ತೋರಿಸಲಾಗಿ ಏಜೆನ್ಸಿಯವರು ನಿಮ್ಮ ಮಗ 2024-25ಸಾಲಿನಲ್ಲಿಯೂ ನಿಮ್ಮ ಅಲ್ಲೆ ಕೆಲಸ ಮಾಡುತ್ತಿದ್ದಾನೆ ಎಂದು ನಿಪಿ-9 ನೀಡಿದ್ದಾರೆ ಎಂದರೆ ಮೊದಲು ಕೆಲಸ ಮಾಡುತ್ತಿದ್ದ ಎಂದು ಉತ್ತರಿಸುತ್ತಾರೆ. ತನುಶ್ರೀ ಮ್ಯಾನ್ ಪವರ್ ಅಂಡ್ ಸೆಕ್ಯೂರಿಟಿ ಏಜೆನ್ಸಿಗೆ ಯಾರು ಮಾಲೀಕರು ಇದ್ದಾರೆ ಎಂದು ಯಾವುದೇ ಕಾಗದ ಪತ್ರ ಹಾಜರುಪಡಿಸಿಲ್ಲ ಎಂದರೆ ಅದರ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದು ಉತ್ತರಿಸುತ್ತಾರೆ. ನಿಪಿ-12 ರಿಂದ 15 ರ ಸ್ಯಾಲರಿ ಸ್ಲಿಪಗಳನ್ನು ಈ ಕೇಸಿಗಾಗಿ ಸೃಷ್ಟಿಸಿ ಸಲ್ಲಿಸಿರುತ್ತೀರಿ ಎಂದರೆ ಸರಿಯಲ್ಲ.

3. ಅಪಘಾತವಾದಾಗ ನನ್ನ ಮಗ ಕಾರಿನಲ್ಲಿ ಹೋಗುತ್ತಿದ್ದನು. ನನ್ನ ಮಗ ಯಾದಗಿರಿಯಿಂದ ಬಿಜಾಪೂರಕ್ಕೆ ಹೋಗುತ್ತಿದ್ದನು. ಅಪಘಾತವು ಎಲ್ಲಿ ಆಗಿದೆ ಎಂದರೆ ಕೆಲ್ಲೂರ ಕ್ರಾಸ್ ಎಂದು ಉತ್ತರಿಸುತ್ತಾರೆ. ನಿಮ್ಮ ಮಗ ಹೋಗುತ್ತಿದ್ದಂತಹ ಕಾರಿನ ಚಾಲಕನು ಮುಂದೆ ಹೋಗುತ್ತಿದ್ದಂತಹ ಲಾರಿಗೆ ಹಿಂದಿನಿಂದ ಡಿಕ್ಕಿಪಡಿಸಿದ್ದಾನೆ ಎಂದರೆ ಲಾರಿ ಮುಂದೆ ನಿಂತಿತ್ತು ಕಾರ್ ಗುದ್ದಿದೆ ಎಂದು ನನ್ನ ಮಗ ಹೇಳಿರುತ್ತಾನೆ ಎಂದು ಉತ್ತರಿಸುತ್ತಾರೆ. ಪೊಲೀಸರು ಹಾಕಿದಂತಹ ಸ್ಕೆಚ್ ಮ್ಯಾಪಿನ ಪ್ರಕಾರ ಲಾರಿಯು ರಸ್ತೆಯ ಎಡಭಾಗಕ್ಕೆ ಹೊರಟಿತ್ತು ಎಂದರೆ ಸರಿ. ಅಪಘಾತವು ನಿಮ್ಮ ಮಗ ಹೋಗುತ್ತಿದ್ದಂತಹ ಕಾರ್ ಚಾಲಕನ ತಪ್ಪಿನಿಂದ ಆಗಿದೆ ಎಂದರೆ ಗೊತ್ತಿಲ್ಲ. ಈ ಅಪಘಾತದಲ್ಲಿ ಲಾರಿ ಚಾಲಕನ ತಪ್ಪು ಇಲ್ಲ ಎಂದರೆ ಇಬ್ಬರದು ಇದೆ ಎಂದು ಉತ್ತರಿಸುತ್ತಾರೆ. ಅಪಘಾತವು ನಾನು ಕಣ್ಣಾರೆ ನೋಡಿಲ್ಲ ಎಂದು ಉತ್ತರಿಸುತ್ತಾರೆ. ಅಪಘಾತವಾದ ವಿಷಯವನ್ನು ನನ್ನ ಮಗ ಮಲ್ಲಿಕಾರ್ಜುನ ಹೇಳಿರುತ್ತಾನೆ. ನಿಮ್ಮ ಮಗ ಮಲ್ಲಿಕಾರ್ಜುನನು ಅಪಘಾತವಾದ ನಂತರ ಅಪಘಾತವಾದ ಸ್ಥಳಕ್ಕೆ ಹೋಗಿರುತ್ತಾನೆ. ನಿಮ್ಮ ಮಗ ಮಲ್ಲಿಕಾರ್ಜುನ ಸಹ ಅಪಘಾತವನ್ನು ಕಣ್ಣಾರೆ

ನೋಡಿಲ್ಲ ಎಂದರೆ ಸರಿ. ಅಪಘಾತವು ಲಾರಿ ಚಾಲಕನ ತಪ್ಪಿ ನಿಂದ ಆಗಿದೆ ಎಂದು ನಿಮ್ಮ ಸಾಕ್ಷಿ ಪ್ರಮಾಣ ಪತ್ರದಲ್ಲಿ ಸುಳ್ಳು ಹೇಳಿ ಬರೆಸಿರುತ್ತೀರಿ ಎಂದರೆ ಸರಿಯಲ್ಲ. ನಿಮಗೆ ಯಾವುದೇ ಆಧಾರ ಇಲ್ಲದೇ ಪರಿಹಾರ ಕೇಳುತ್ತಿದ್ದೀರಿ ಎಂದರೆ ಸರಿಯಲ್ಲ.

**2ನೇ ಎದುರುದಾರರು ಪರ ವಕೀಲರು ಮಾಡಿದಂತಹ ವಾಟೀ ಸವಾಲಿನ ಪ್ಯಾರಾ ನಂ.1 ಮತ್ತು 2 ನ್ನು 4ನೇ ಎದುರುದಾರರ ಪರ ವಕೀಲರು ಅಳವಡಿಸಿಕೊಳ್ಳುತ್ತಾರೆ.**

**ವಾಟೀ ಸವಾಲುಃ 4ನೇ ಎದುರುದಾರರ ಪರ ಶ್ರೀ.ವಿ.ಸಿ.ಎಂ.ಪಿ. ವಕೀಲರಿಂದ**

1. ಅಪಘಾತವಾದ ಸಮಯದಲ್ಲಿ ನನ್ನ ಮಗ ಲೋಕೇಶನ ವಯಸ್ಸು 38 ರಿಂದ 39 ವರ್ಷ ಇರಬಹುದು. ನನ್ನ ಮಗನ ವಯಸ್ಸು ತೋರಿಸಲು ಆಧಾರ್ ಕಾರ್ಡ್ ಹಾಜರುಪಡಿಸಿರುತ್ತೇನೆ. ನಿಮ್ಮ ಮಗನಿಗೆ ಅಪಘಾತವಾದ ಸಮಯದಲ್ಲಿ 38 ವರ್ಷ ವಯಸ್ಸು ಇತ್ತು ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ನೀವು ಮೃತ ಲೋಕೇಶನ ಆದಾಯದ ಮೇಲೆ ಅವಲಂಬಿತರಾಗಿದ್ದೀರಿ ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

2. ಅಪಘಾತವಾದ ದಿನ ನನ್ನ ಮಗ ಕಾರಿನಲ್ಲಿ ಹೋಗುತ್ತಿದ್ದನು. ಸದರಿ ಕಾರಿನಲ್ಲಿ ಇಬ್ಬರು ಹೋಗುತ್ತಿದ್ದರು. ಸದರಿ ಕಾರ್ ಕಚೇರಿಯ ಕಾರ್ ಇರಲಿಲ್ಲ ನನ್ನ ಮಗ ಕಚೇರಿಯ ಕೆಲಸಕ್ಕೆ ಆ ಕಾರಿನಲ್ಲಿ ಹೋಗಿದ್ದನು. ಅಪಘಾತದ ವಿಷಯವನ್ನು ನನ್ನ ಮಗ ಮಲ್ಲಿಕಾರ್ಜುನ ತಿಳಿಸಿದನು. ನನ್ನ ಮಗ ಮಲ್ಲಿಕಾರ್ಜುನ ಅಪಘಾತವಾದ ಸಮಯದಲ್ಲಿ ಅಪಘಾತವಾದ ಸ್ಥಳದಲ್ಲಿ ಇರಲಿಲ್ಲ. ಪೊಲೀಸರಿಗೆ ದೂರನ್ನು ನನ್ನ ಮಗ ಮಲ್ಲಿಕಾರ್ಜುನ ನೀಡಿರುತ್ತಾನೆ. ನಿಮ್ಮ ಮಲ್ಲಿಕಾರ್ಜುನನಿಗೆ ಅಪಘಾತದ ಬಗ್ಗೆ

ಗೊತ್ತಿಲ್ಲ ಎಂದರೆ ಸರಿಯಲ್ಲ. ಅಪಘಾತವು ಲಾರಿ ಕಾರ್ ಒಂದಕ್ಕೊಂದು ಟಕ್ಕರ್ ಆಗಿರುತ್ತದೆ ಎಂದು ಹೇಳಿ ಸಾಕ್ಷಿ ಮುಂದುವರೆದು ಲಾರಿಯ ಹಿಂದೆ ಕಾರ್ ಎಂದು ಉತ್ತರಿಸುತ್ತಾರೆ. ಲಾರಿ ಚಾಲಕ ಒಮ್ಮೆಲೇ ಬ್ರೇಕ್ ಹಾಕಿದ್ದರಿಂದ ಅಪಘಾತ ಆಗಿರುತ್ತದೆ ಎಂದರೆ ಸರಿ. ಲಾರಿ ಚಾಲಕನ ತಪ್ಪಿನಿಂದ ಅಪಘಾತ ಆಗಿರುತ್ತದೆ. ಕಾರ್ ಚಾಲಕನ ತಪ್ಪಿ ನಿಂದ ಅಪಘಾತ ಆಗಿಲ್ಲ ಎಂದರೆ ಸರಿ. ಕಾರ್ ಚಾಲಕನ ತಪ್ಪಿನಿಂದ ಅಪಘಾತ ಆಗಿಲ್ಲದಿದ್ದರೂ ಸಹ ಆತ ಮೇಲೆ ಸುಳ್ಳ ಕೇಸ್ ಮಾಡಿದ್ದೀರಿ ಎಂದರೆ ಸರಿಯಲ್ಲ. ಪರಿಹಾರ ಹಣ ಕೇಳಲು ಯಾವುದೇ ಆಧಾರ ಇಲ್ಲದೇ ಅಂದಾಜಿನ ಮೇಲೆ ಹಾಕಿರುತ್ತೀರಿ ಎಂದರೆ ಸರಿಯಲ್ಲ. ಕಾರಿನ ಚಾಲಕನ ಮೇಲೆ ಸುಳ್ಳು ದಾಖಲೆಗಳನ್ನು ಸೃಷ್ಠಿ ಮಾಡಿ ಕೇಸ್ ಮಾಡಿದ್ದೀರಿ ಎಂದರೆ ಸರಿಯಲ್ಲ.

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

ಓ ಹೇ.ಕೇ. ಸರಿ ಅದೆ

ಹಿರಿಯ ಸಿವಿಲ್ ಮತ್ತು ಜೆ ಎಮ್ ಎಫ್ ಸಿ ನ್ಯಾಯಾಧೀಶರು,
ಜೇವರ್ಗಿ